




ತೋರಿಸಿ ‘ಈ ಮರ ನಿಮಗೆ ಗೊತ್ತೆ ?’ ಎಂದು ಕೇಳಿದರು. ನಮ್ಮ ದೇಶದಲ್ಲಿ, ಅದರಲ್ಲೂ ನಮ್ಮ ರಾಜ್ಯದ ಹಾಗೂ ಕೇರಳದ ಅರೆ–ನಿತ್ಯ ಹರಿದ್ವರ್ಣ ಕಾಡುಗಳಲ್ಲಿ ಹಾಗೂ ಎಲೆ ಉದುರುವ ಕಾಡುಗಳಲ್ಲಿ ಈ ಜಾತಿಯ ಮರವನ್ನು ನೋಡಿದ್ದೆ. ಜೊತೆಗೆ ಕೇರಳದ ನಿಲಂಬೂರಿನಲ್ಲಿರುವ ನಮ್ಮ ಅರಣ್ಯ ಸಂಶೋಧನಾ ಕೇಂದ್ರದ ಔಷಧಿ ಸಸ್ಯೋದ್ಯಾನದಲ್ಲೂ ಬೆಳೆಸಿರುವುದರಿಂದ ಆ ಮರದ ಪರಿಚಯ ಚೆನ್ನಾಗಿತ್ತು. ‘ಸರ್! ಇದು **Naringi crenulata** ಅಲ್ಲವೇ ಎಂದು ಕೇಳಿದಾಗ ಅವರು ಹೌದೆಂದರು.

ನಿಂಬೆ, ಕಿತ್ತಳೆ, ಕರಿಬೇವುಗಳ ಕುಟುಂಬವಾದ **Rutaceae** ಗೆ ಸೇರಿದ ಈ ಮರಕ್ಕೆ ಕನ್ನಡದಲ್ಲಿ ನಾಯಿನಿಂಬೆ, ಕಾಡುನಿಂಬೆ, ಅರುಣಮುಳ್ಳು ಎಂದು ಹಾಗೂ ಸಂಸ್ಕೃತದಲ್ಲಿ ಬಿಲ್ವಪರ್ಣಿ ಎಂದು ಹೆಸರಿದೆ. ಸುಮಾರು 10 ಮೀಟರ್‌ನಷ್ಟು ಎತ್ತರಕ್ಕೆ ಬೆಳೆಯುವ ಮುಳ್ಳುಗಳಿರುವ ಈ ಮರದಲ್ಲಿ ನೀಲವರ್ಣದ ಗುಂಡು–ಮಣಿ ಗಾತ್ರದ ಹಣ್ಣುಗಳು ಬಿಡುತ್ತವೆ. ‘ಸರ್, ಈ ಮರವು ನಮ್ಮಲ್ಲೂ ಬೆಳೆಯುತ್ತದೆ. ಇದೊಂದು ಗಟ್ಟಿಮರ. ಹಾಗಾಗಿ, ಒನಕೆ, ಗುದ್ದಲಿ ಮತ್ತು ಕೊಡಲಿ ಕಾವು, ಪೆಟ್ಟಿಗೆಗಳನ್ನು ಮಾಡಲು ಬಳಸುತ್ತಾರೆ. ಜೊತೆಗೆ, ವಿಷ–ವೈದ್ಯ ಚಿಕಿತ್ಸಾ ಪದ್ಧತಿಯಲ್ಲಿ ಈ ಮರದ ಎಲ್ಲ ಭಾಗಗಳನ್ನು ಪ್ರತಿ–ವಿಷವಾಗಿ ಬಳಸುತ್ತಾರೆ ಎಂದು ಹೇಳಿದೆ. ಅದಕ್ಕವರು, ‘ಈ ಮರದ ಬಲಿತ ಕಾಂಡ ಹಾಗೂ ಕೊಂಬೆಗಳನ್ನೇ ನಾವು ತನಕಾವಾಗಿ ಬಳಸುವುದು. ಇದರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಮಿಸ್ ಕಾಂಗ್ ವಿನ್ಮೊ **(Daw KhaingWit Mhone)** ತಿಳಿಸಿಕೊಡುತ್ತಾರೆ ಎಂದು ಪಕ್ಕದಲ್ಲಿದ್ದವರನ್ನು ಪರಿಚಯಿಸಿದರು.

ತನಕಾದ ಬಗ್ಗೆ ಕಾಂಗ್ ವಿನ್ಮೊ ಕೊಟ್ಟ ಮಾಹಿತಿಯನ್ನು ಇಲ್ಲಿ ನೀಡಿದ್ದೇನೆ. ತನಕಾವನ್ನು ಸೌಂದರ್ಯ ಲೇಪನವಾಗಿ ಬಳಸುವುದು ಬರ್ಮ ದೇಶದಲ್ಲಿ ಸುಮಾರು 2000 ವರ್ಷಗಳಿಂದ ರೂಢಿಯಲ್ಲಿದೆ. ಹದಿನಾಲ್ಕನೇ ಶತಮಾನದಲ್ಲಿ ದಕ್ಷಿಣ ಬರ್ಮಾದಲ್ಲಿ ರಾಜನಾಗಿದ್ದ ರಾಜಾಧಿರಾತ್‌ನ ಆಸ್ಥಾನ ಕವಿಯೊಬ್ಬ ಬರೆದ ಪದ್ಯದಲ್ಲೂ ತನಕಾದ ಬಗ್ಗೆ ಉಲ್ಲೇಖವಿದೆಯಂತೆ.

ಈ ಮರದ ತುಂಡನ್ನು ಒಂದು ಕಲ್ಲಿನ ಮಣೆಯ ಮೇಲೆ ಸ್ವಲ್ಪ ನೀರನ್ನು ಚಿಮುಕಿಸಿಕೊಂಡು ತೇಯುತ್ತಾರೆ. ಆಗ ಲಭ್ಯವಾಗುವ ಲೇಪನವನ್ನು ಕೈ ಬೆರಳು ಇಲ್ಲವೇ ಬ್ರಷ್ ಬಳಸಿ ಕೆನ್ನೆ, ಮೂಗು, ಹಣೆ ಹಾಗೂ ಕೆಲವೊಮ್ಮೆ ಕೈಗಳ ಮೇಲೆ ಪೂರ್ಣವಾಗಿಯೋ ಅಥವಾ ಅಲಂಕಾರಿಕವಾಗಿಯೋ ಲೇಪಿಸಿಕೊಳ್ಳುತ್ತಾರೆ. ಯುವಕ, ಯುವತಿಯರು ತನಕಾವನ್ನು ಬಳಸಿ ವಿವಿಧ ಚಿತ್ತಾರಗಳನ್ನು ಅವರ ಮುಖದ ಮೇಲೆ ಮೂಡಿಸಿಕೊಂಡಿರುವುದನ್ನು ನೋಡಲು ಆಕರ್ಷಕವಾಗಿರುತ್ತದೆ.

ಆದರೆ, ಕಾಂಗ್ ವಿನ್ಮೊ ಅವರ ಪ್ರಕಾರ ಬೇಸಿಗೆಯಲ್ಲಿ ತನಕಾವನ್ನು ಮುಖದ ತುಂಬಾ ಹಚ್ಚಿಕೊಳ್ಳುವುದರಿಂದ ತಂಪನ್ನು ನೀಡುತ್ತದೆ. ತನಕಾದಲ್ಲಿರುವ ಕ್ವಾಮೆರಿನ್ ಹಾಗೂ ಮಾರ್ಮೆಸಿನ್ ಎಂಬ ಸಕ್ರಿಯ ರಾಸಾಯನಿಕ ಘಟಕಾಂಶಗಳು ನಂಜುನಿರೋಧಕ ಮತ್ತು ಮುಖದಲ್ಲಿ ಸುಕ್ಕು ಉಂಟಾಗುವ ಪ್ರಕ್ರಿಯೆಯನ್ನು ನಿಧಾನಗೊಳಿಸುವ ಶಕ್ತಿಯನ್ನು ಹೊಂದಿವೆ. ಜೊತೆಗೆ, ತನಕಾದಲ್ಲಿರುವ ಮತ್ತೊಂದು ಸಕ್ರಿಯ ರಾಸಾಯನಿಕ ಘಟಕಾಂಶವಾದ ಟೈರೋಸಿನೇಸ್ ಹಾಗೂ ವಿಟಮಿನ್–ಇ ಗಳು ಮುಖದ ಕಾಂತಿಯನ್ನು ವರ್ಧಿಸುತ್ತವೆ. ಈ ಎಲ್ಲ ಕಾರಣಗಳಿಂದ, ನೈಸರ್ಗಿಕ ಸೌಂದರ್ಯ ಹಾಗೂ ಚರ್ಮದ ಆರೋಗ್ಯ ಪರಿಪಾಲಕ ತನಕಾದ ಬಳಕೆ ಹಾಗೂ ಬೇಡಿಕೆ ದಿನದಿಂದ ದಿನಕ್ಕೆ ವರ್ಧಿಸುತ್ತಿದೆ. ಆದುದರಿಂದ, ಮಯನ್ಮಾರ್ ದೇಶದ ಕೆಲವು ಒಣ ಪ್ರದೇಶಗಳಲ್ಲಿ ರೈತರು ತನಕಾವನ್ನು ಬೆಳೆಸಿ ನಾಲ್ಕೈದು ವರ್ಷಗಳ ನಂತರ ಮರವೊಂದಕ್ಕೆ ಸುಮಾರು 300–700 ರೂಪಾಯಿನಂತೆ ಕೃಷಿ– ನಡೆಸಿದ ಸ್ಥಳದಲ್ಲಿಯೇ ಮಾರುತ್ತಾರೆ.